**ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 50/2021**

| | | | |
|---|---|---|---|
| **ಹೆಸರು** | **:** | **ನಾಜೀಯಾ ಬೇಗಂ** | **ಚಾಸಾ. 6** |
| **ತಂದೆಯ ಹೆಸರು** | **:** | **ಮೇಹಬೂಬ ಸಾಬ** | **ಪ್ರಾ.ಸಾ. 1** |
| **ವಯಸ್ಸು** | **:** | **35 ವರ್ಷ** | **ದಿನಾಂಕಃ 20-09-2025** |
| **ಉದ್ಯೋಗ** | **:** | **ಅಬಕರಿ ನಿರೀಕ್ಷಕರು** | |
| **ವಾಸಸ್ಥಳ** | **:** | **ವಿಜಯನಗರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

2015 ರಿಂದ 2021 ರವರೆಗೆ ಅಬಕಾರಿ ಉಪನಿರೀಕ್ಷಕರಾಗಿ ಚಿಂಚೋಳಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 13-04-2020 ರಂದು ಮಧ್ಯಾಹ್ನ 1 ಗಂಟೆ ಸುಮಾರಿಗೆ ನಾನು ಕರ್ತವ್ಯದಲ್ಲಿದ್ದಾಗ ಕಲ್ಲಬಾವಿ ತಾಂಡಾದಲ್ಲಿ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಭಾತ್ಮಿ ಬಂದಿದ್ದು, ಆದ್ದರಿಂದ ನನ್ನ ಮೇಲಾಧಿಕಾರಿಗಳ ಸೂಕ್ತ ಮಾರ್ಗದರ್ಶನ ಪಡೆದುಕೊಂಡು ಪಂಚರಾದ ಚಾಸಾ-1 ಮತ್ತು 2 ರವರನ್ನು ಚಂದಾಪುರ ಗಾಂಧಿ ಸರ್ಕಲನಿಂದ  ಕರೆಸಿ ಅವರಿಗೆ ಭಾತ್ಮಿ ಬಗ್ಗೆ ತಿಳಿಸಿ ಅವರು ಪಂಚರಾಗಲು ಒಪ್ಪಿ ಕೊಂಡ ಮೇರೆಗೆ ನಾನು, ಸಿಬ್ಬಂದಿಯಾದ ಚಾಸಾ-3, 4 ಮತ್ತು 7 ಹಾಗೂ ಪಂಚರು ಸೇರಿ ಭಾತ್ಮಿ ಸ್ಥಳಕ್ಕೆ ಹೊರಟು ಮಧ್ಯಾಹ್ನ 1-40 ಗಂಟೆ ಸುಮಾರಿಗೆ ಭಾತ್ಮಿ ಸ್ಥಳದಲ್ಲಿ ಹೋದಾಗ ಸದರಿ ಬಾತ್ಮಿ ಬಂದ ಮನೆಯ ಮುಂದೆ ವಾಹನವನ್ನು ನಿಲ್ಲಿಸುತ್ತಿದಂತೆ ನಮ್ಮನ್ನು ನೋಡಿ ಜನ ಸೇರಿದ್ದರು. ಸದರಿ ಮನೆಯನ್ನು ತಪಾಸಣೆ ಮಾಡಿ ಪಂಚರ ಸಮಕ್ಷಮ ಶೋಧನ ಪತ್ರವನ್ನು ತಯಾರಿಸಿ ಮನೆಯನ್ನು ಶೋಧನೆ ಮಾಡಿದಾಗ ಸದರಿ ಮನೆಯ ಒಂದು ಮೂಲೆಯಲ್ಲಿ ಒಂದು ಪ್ಲಾಸ್ಟಿಕ ಚೀಲ ಕಂಡು ಬಂದಿದ್ದು ಅದರಲ್ಲಿ 2 ಲೀಟರ ಸಾಮರ್ಥ್ಯದ 3 ಪ್ಲಾಸ್ಟಿಕ ಪ್ಯಾಕೇಟಗಳು ಕಂಡು ಬಂದಿರುತ್ತದೆ. ಅವುಗಳಲ್ಲಿ ಒಟ್ಟು 6  ಲೀಟರ ಸೇಂದಿ ಕಂಡು ಬಂದಿರುತ್ತದೆ. ಅಲ್ಲಿಂದ ವ್ಯಕ್ತಿಗಳಿಗೆ ಕೇಳಿದಾಗ ಸದರಿ ಮನೆ ಹೀರು ತಂದೆ ಭೋಜುರವರಿಗೆ ಸೇರಿದ್ದು ಎಂದು ತಿಳಿಸಿರುತ್ತಾರೆ. ಸದರಿ ಮನೆಯಲ್ಲಿ ಒಂದು ಆಧಾರ ಕಾರ್ಡನ ನಕಲು ದೊರೆತಿದ್ದು ಅದರಲ್ಲಿಯೂ ಸಹ ಹೀರು ತಂದೆ ಭೋಜು ಎಂದು ನಮೂದು ಆಗಿರುತ್ತದೆ. ನಂತರ ಸದರಿ ಸೇಂದಿಯನ್ನು ಜಪ್ತಿ ಮಾಡಿ 180 ML ಅಳತೆಯ ಒಂದು ಗಾಜಿನ ಬಾಟಲಿಯಲ್ಲಿ ಸದರಿ ಸೇಂದಿಯನ್ನು ರಾಸಾಯನಿಕ ಪರೀಕೆಗಾಗಿ ಸೀಲ್ ಮಾಡಿ ಪಂಚರ ಸಮಕ್ಷಮ ಮಧ್ಯಾಹ್ನ 1.50 ರಿಂದ 2.50ರವರೆಗೆ ಜಪ್ತಿ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿಗಳನ್ನು ಪಡೆದು ಮರಳಿ ಕಛೇರಿಗೆ

ಬಂದು ಪ್ರಕರಣವನ್ನು ದಾಖಲಿಸಿರುತ್ತೇನೆ.

ಈಗ ನೋಡುತ್ತಿರುವ ಶೊಧನ ಸಮುಚಿತ ಪತ್ರ ನಾನೇ ತಯಾರಿಸಿದ್ದು ಮತ್ತ ಅದರಲ್ಲಿ ನನ್ನ ಸಹಿ ಇದೆ. ಸದರಿ ಶೋಧನ ಸಮುಚಿತ ಪತ್ರವನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪಂಚನಾಮೆಯನ್ನು ನಾನೇ ತಯಾರಿಸಿದ್ದು ಮತ್ತ ಅದರಲ್ಲಿ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಮಾದರಿ ಸೀಲ್ ಪತ್ರ ನಾನೇ ತಯಾರಿಸಿದ್ದು ಮತ್ತ ಅದರಲ್ಲಿ ನನ್ನ ಸಹಿ ಇದೆ. ಸದರಿ ಮಾದರಿ ಸೀಲ್ ಪತ್ರವನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದೂರು ನಾನೇ ಸಲ್ಲಿಸಿದ್ದು ಮತ್ತ ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ-4 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪ್ರ.ವ.ವರದಿ ನಾನೇ ದಾಖಲಿಸಿದ್ದು ಮತ್ತ ಅದರಲ್ಲಿ ನನ್ನ ಸಹಿ ಇದೆ. ಸದರಿ ಪ್ರ.ವ.ವರದಿಯನ್ನು ನಿಪಿ-5 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಆ ದಿನ ಜಪ್ತಿ ಮಾಡಲಾದ ಸೇಂದಿಯನ್ನು 180 ML ಬಾಟಲಿಯಲ್ಲಿ ತುಂಬಿದ್ದು ಸದರಿ 180 ML ಬಾಟಲನ್ನು ಈಗ ನೋಡುತ್ತಿದ್ದು ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು.

ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-9ರವರಿಗೆ ಸಲ್ಲಿಸಿದ್ದೇನೆ.

**<u>ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ VRR ವಕೀಲರಿಂದಃ</u>**

ಆ ದಿನ ನಾನು ಆರೋಪಿಗೆ ನೋಡಿಲ್ಲ ಎಂದರೆ ಸರಿ. ಸಾರ್ವಜನಿಕರು ಆರೋಪಿಯ ಮನೆಯನ್ನು ತೋರಿಸಿರುತ್ತಾರೆ. ಸದರಿ ಸಾರ್ವಜನಿಕರು ತಮ್ಮ ಹೆಸರನ್ನು ಹೇಳಿರುವುದಿಲ್ಲ. ಆರೋಪಿಯ ಮನೆಗೆ ಬೀಗ ಹಾಕಿರುವುದಿಲ್ಲ. ಘಟನಾ ಸಮಯಕ್ಕೆ ಕರೋನಾ ಪ್ರಯುಕ್ತ ಲಾಕಡೌನ ಇತ್ತು ಎಂದರೆ ಸರಿ. ಪಂಚರು ಸಾರ್ವಜನಿಕ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಿ ಅಲ್ಲಿಂದ ಕಳುಹಿಸಿರುತ್ತೇವೆ. ಬಾತ್ಮಿ ಬಂದಾಗ ಮಧ್ಯಾಹ್ನ 1.25 ಗಂಟೆಯಾಗಿತ್ತು. ಆ ದಿನ ಎಷ್ಟು ಪ್ರಕರಣಗಳಲ್ಲಿ ದಾಳಿಗಾಗಿ ಹೋಗಿರುತ್ತೇನೆ ಎಂದು ನನಗೆ ನೆನಪಿಲ್ಲ. 42 ಪ್ರತಿಶಹ ಮಧ್ಯದ ಅಂಶ ಇದ್ದರೇ ಮಾತ್ರ ಅದನ್ನು ಸೇಂದಿ ಎಂದು ಪರಿಗಣಿಸಲಾಗುತ್ತದೆ.

ಸ್ಥಳಿಯ ವ್ಯಕ್ತಿಗಳಿಗೆ ಯಾವ ಕಾರಣಕ್ಕಾಗಿ ಪಂಚರಾಗಿ ಕರೆಸಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಅವರು

ಒಪ್ಪಿರುವುದಿಲ್ಲ ಎಂದು ನುಡಿಯುತ್ತಾರೆ. ಸರಕಾರದಿಂದ ನನಗೆ ಇಂತಹ ಪ್ರಕರಣಗಳನ್ನು ದಾಖಲಿಸಬೇಕು ಎಂದು ಸೂಚನೆ ಇತ್ತು ಎಂದರೆ ಸರಿಯಲ್ಲ. ಅಂಕೆ ಸಂಖ್ಯೆಗೊಸ್ಕರ ಯಾವುದೇ ದಾಳಿ ಮಾಡದೇ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**